# ಜನ ಬಯಸೋದು ಗೋಳಾಟದ ಕಥೆ

**ಸಿಂಚನಾ ಪ್ರೀತಂ ಶೆಟ್ಟಿ**
**ಸ್ಟಾರ್ ಸುವರ್ಣದ 'ನೀನಾದೆನು ನಾ' ದೇವಕಿ**



◆ **ಮರಳಿ ಮತ್ತೆ ನಟನೆ ಆರಂಭಿಸಿದ್ದೀರಿ. ಈಗ ಹೇಗೆನಿಸುತ್ತಿದೆ?**

ಸಿನಿಮಾ, ಸೀರಿಯಲ್ ನಿರ್ಮಾಣ ಮಾಡುತ್ತಿದ್ದರಿಂದ ಮೂರು ವರ್ಷದ ಹಿಂದೆ ನಟನೆಯಿಂದ ಹಿಂದೆ ಸರಿದಿದ್ದೆ. ಆಗ ನನ್ನ ಪತಿ ನಿರ್ದೇಶನದಲ್ಲಿ ಬಿಜಿ ಇದ್ದರು. ನಿರ್ಮಾಣ ಸಂಸ್ಥೆಯನ್ನು ಹೊಸದಾಗಿ ಮಾಡಿದ್ದರಿಂದ ಆ ಕಡೆ ಗಮನಕೊಟ್ಟೆ. ಅದಕ್ಕಿಂತ ಮುಂಚೆ ಸಿನಿಮಾವೊಂದರ ನಿರ್ದೇಶನದಲ್ಲಿ ತೊಡಗಿದ್ದೆ. ಹಾಗಾಗಿ ಅಭಿನಯಿಸುವುದು ಬೇಡ ಎಂದೇ ತೀರ್ಮಾನಿಸಿದ್ದೆ. ನಟಿಸಲೇಬೇಕಾದ ಅನಿವಾರ್ಯತೆ ಎದುರಾಯಿತು.

ದೇವಕಿ ಪಾತ್ರದ ಚರ್ಚೆ ಬಂದಾಗ ಫಿಕ್ಷನ್ ಮುಖ್ಯಸ್ಥೆ ಶಿಲ್ಪಾ ನನಗೆ ಮಾಡಲು ತಿಳಿಸಿದರು. ನನ್ನಿಂದ ಆಗಲಾರದು ಎಂದು ಹೇಳಿದ್ದೆ. ಹತ್ತಾರು ಜನರನ್ನು ಆಡಿಷನ್ ಮಾಡಿ ಒಬ್ಬರನ್ನು ಆಯ್ಕೆ ಮಾಡಿಕೊಂಡಿದ್ದೆವು. ಇನ್ನೇನು ನಾಳೆ ಚಿತ್ರೀಕರಣ ಆರಂಭಿಸಬೇಕು ಅನ್ನುವ ಹೊತ್ತಿಗೆ ಅವರು ಬರಲು ಸಾಧ್ಯ ಆಗಲ್ಲ ಎಂದರು. ಎರಡನೇ ಆಯ್ಕೆಯ ಹುಡುಕಾಟ ಮಾಡಿದೆವು. ಅದೂ ಸಾಧ್ಯ ಆಗಲಿಲ್ಲ. ಈ ಪಾತ್ರಕ್ಕೆ ಸಾಕಷ್ಟು ಕಲಾವಿದರ ಆಡಿಷನ್ ತೆಗೆದುಕೊಂಡ ನಾನೇ ಕೊನೆಗೆ ಮಾಡಬೇಕಾಯಿತು. ಚಿತ್ರೀಕರಣ ಮಂಗಳೂರಿನಲ್ಲಿ ನಡೀತಾ ಇತ್ತು. ನಾನು ಬೆಂಗಳೂರಿನಲ್ಲಿ ಇದ್ದೆ. ಶೂಟಿಂಗ್ ಮನೆ ತಲುಪುವ ತನಕ ನನಗೆ ಭರವಸೆ ಇರಲಿಲ್ಲ. ನನ್ನಿಂದ ಮಾಡಲು ಸಾಧ್ಯ ಎಂದು ಶಿಲ್ಪಾ ಮತ್ತು ಪ್ರೀತಂ ಧೈರ್ಯ ತುಂಬಿದ್ದರು. ವಿಲನ್ ಪಾತ್ರಕ್ಕೆ ಕಾಮಿಕ್ ಟಚ್ ಕೊಟ್ಟು ಅದನ್ನು ಬ್ಲೆಂಡ್ ಮಾಡಿದ್ದಾರೆ.

◆ **ನಿರ್ಮಾಪಕಿಯಾಗಿ ಎಂತಹ ಸವಾಲುಗಳನ್ನು ಎದುರಿಸುತ್ತೀರಿ?**

ಈಗ ಕೆಲಸದ ಅವಕಾಶಗಳು ಹೆಚ್ಚಿವೆ. ಒಬ್ಬ ಸೆಟ್ ಹುಡುಗನಿಗೂ ಕೆಲಸವನ್ನು ತಿದ್ದಿಕೊಳ್ಳಲು ಯೋಚಿಸಿ ಹೇಳಬೇಕಾದ ಪರಿಸ್ಥಿತಿ ಇದೆ. ಅವನಿಗೆ ಮತ್ತೊಂದು ಅವಕಾಶ ಕಾದಿರುತ್ತದೆ. ನಿರ್ಮಾಪಕರು ಕೋಟಿ ಕೋಟಿ ಸಂಪಾದಿಸುತ್ತಾರೆ ಎನ್ನುವ ಮಾತು ಇದೆ. ಇವತ್ತಿನ ಸಂದರ್ಭದಲ್ಲಿ ದುಡ್ಡು ಮಾಡುವುದು ದೂರದ ಮಾತು. ಪ್ಯಾಶನ್ ಇರುವವರು ಮಾತ್ರ ನಿರ್ಮಾಣಕ್ಕೆ ಕೈ ಹಾಕುತ್ತಿರುವುದು ವಾಸ್ತವ. ಸದ್ಯ ಹಣ ಮಾಡುತ್ತೇವೆ ಎನ್ನುವವರು ನಿರ್ಮಾಣ ಮಾಡಲು ಸಾಧ್ಯವೂ ಇಲ್ಲ. ಸಂಭಾವನೆಯ ಪ್ರಮಾಣವನ್ನು ಐದಾರು ವರ್ಷಗಳ ಹಿಂದಕ್ಕೆ ಹೋಲಿಸಿದರೆ ವೆಚ್ಚ ದುಪ್ಪಟ್ಟಾಗಿದೆ. ಇಂತಹ ಪಾತ್ರ ಬೇಕು, ಇಂತಹ ತಂತ್ರಜ್ಞರು ಬೇಕು ಎಂದಾಗ ಅವರು ಕೇಳಿದ ಪೇಮೆಂಟ್ ಕೊಡಲೇಬೇಕು. ನಮ್ಮ ಶೋ ನಾವು ಉಳಿಸಿಕೊಳ್ಳಲು ಇಂತಹ ಸವಾಲು ಎದುರಿಸಲೇಬೇಕು. ಇದನ್ನು ಜಾಬ್ ರೀತಿ ನೋಡಲು ಆಗುವುದಿಲ್ಲ. ಒಟ್ಟಾರೆ ಪ್ರಾಜೆಕ್ಟ್ ಗೆಲ್ಲಬೇಕು ಎನ್ನುವ ದೃಷ್ಟಿ ಮಾತ್ರ ಇರಬೇಕು. ಎಷ್ಟೇ ಶ್ರಮಪಟ್ಟರೂ ಕೀರ್ತಿಯ ಪಾಲು ಕಲಾವಿದರಿಗೆ ಹೆಚ್ಚು ಹೋಗುತ್ತದೆ.

◆ **ಕಥೆಯ ಟ್ರ್ಯಾಕ್ ಬದಲಾಗುವುದರಿಂದ ಎಡವಟ್ಟು ಆಗುವುದಿಲ್ಲವೇ?**

ಈಗ ಕಂತುಗಳ ಬ್ಯಾಂಕಿಂಗ್ ಇರುವುದಿಲ್ಲ. ವೀಕ್ಷಕರು ಕೂಡ ಈ ವಾರ ಇಷ್ಟಪಟ್ಟರೆ ಮುಂದಿನ ವಾರ ಅದನ್ನು ನಿರಾಕರಿಸುತ್ತಾರೆ. ಅದು ಟಿಆರ್‌ಪಿ ಮಾನದಂಡ ಮಾತ್ರವಲ್ಲದೆ ಸಾಮಾಜಿಕ ಮಾಧ್ಯಮಗಳ ಪ್ರತಿಕ್ರಿಯೆಗಳಿಂದ ಗೊತ್ತಾಗುತ್ತದೆ. ಆಗ ಬದಲಾಗುವುದು ಅನಿವಾರ್ಯವಾಗುತ್ತದೆ. ಒಂದು ನಿಮಿಷದ ರೀಲ್ಸ್ ನೋಡಿಸುವುದೇ ಕಷ್ಟ. ಹೀಗಿರುವಾಗ 22 ನಿಮಿಷ ಧಾರಾವಾಹಿಯನ್ನು ನಿತ್ಯವೂ ನೋಡುವಂತೆ ಹಿಡಿದಿಡುವುದು ದೊಡ್ಡ ಸಾಹಸವೇ. ಆ ಅನಿವಾರ್ಯತೆಗೆ ಮತ್ತೊಂದು ಕಾರಣವೂ ಇದೆ. ಅದೇ ಸಮಯದಲ್ಲಿ ನಮ್ಮ ಪ್ರತಿಸ್ಪರ್ಧಿ ಕಥೆಗಳು ಸವಾಲನ್ನು ಒಡ್ಡುತ್ತಿರುತ್ತವೆ. ನಮ್ಮ ವೀಕ್ಷಕ ಆ ಕಡೆ ಹೋಗದಂತೆ ಕಾದುಕೊಳ್ಳಬೇಕು. ಒಂದು ಅಂದಾಜಿನ ಪ್ರಕಾರ ಸೀರಿಯಲ್‌ಅನ್ನು ಹಿರಿಯರು ನೋಡುತ್ತಿದ್ದಾರೆ.

ಯುವಕರನ್ನೂ ನಾವು ಆಕರ್ಷಿಸಲು ಪ್ರೀತಿ–ಪ್ರೇಮ, ಕಾಮಿಡಿ ಸನ್ನಿವೇಶವನ್ನು ತರಲೇಬೇಕು. ಆಗ ಮಧ್ಯ ವಯಸ್ಕರು ಜೀವನ ಅಂದ್ರೆ ಲವ್ ಮಾತ್ರನಾ ಎಂದು ಕೇಳುತ್ತಾರೆ. ಹಿರಿಯರು ಬೇರೆ ಪಾತ್ರಗಳಿಗೆ ಬೆಲೆ ಇಲ್ಲವೇ ಅನ್ನುತ್ತಾರೆ. ಈ ಮೂರು ವರ್ಗವನ್ನೂ ನೋಡಬೇಕು. ಹಾಗಾಗಿ ಪ್ರತಿ ಪಾತ್ರಕ್ಕೂ ಪ್ರಾಮುಖ್ಯತೆಯನ್ನು ಕೊಡಬೇಕಾಗುತ್ತದೆ. ಜನರು ಬಯಸಿದಂತೆ ಕಥೆಯನ್ನು ನಾಜೂಕಾಗಿಯೇ ತೆಗೆದುಕೊಂಡು ಹೋಗಬೇಕು.

◆ **ರಿಯಾಲಿಟಿ ಶೋ ಮಾಡಬೇಕು ಅಂದರೆ ನೀವು ಏನು ಮಾಡುತ್ತೀರಿ?**

ರಿಯಾಲಿಟಿ ಶೋ ಅಂದರೆ ಸೆಲೆಬ್ರಿಟಿಗಳು ಮಾತ್ರ ಆಗಬಾರದು. ಕಲಾವಿದರಿಗೆ ನಿತ್ಯ ಕ್ಯಾಮೆರಾ ಎದುರಿಸಿ ರೂಢಿಯಾಗಿರುತ್ತದೆ. ಆಗ ಅದು ನೈಜ ಅನ್ನಿಸಲ್ಲ. ಜನರ ನಡುವೆ ಶೋವನ್ನು ತೆಗೆದುಕೊಂಡು ಹೋಗಬೇಕು. ಹಿಂದಿನ ಮಾದರಿಯನ್ನು ಇಟ್ಟುಕೊಂಡರೆ, ಅಲ್ಲಿ ಸಿದ್ಧತೆ ಮಾಡಿಕೊಂಡು ಶೋಗೆ ಬರುತ್ತಾರೆ ಎಂದೆನಿಸುತ್ತದೆ. ಈಗ ಮಕ್ಕಳ ಕಾರ್ಯಕ್ರಮ ಮಾಡಿಕೊಂಡರೂ ಆ ಮಕ್ಕಳೂ ಪ್ಲಾನ್ ಮಾಡಿಕೊಳ್ಳುವ ಸ್ಥಿತಿ ಇದೆ. ರಿಯಾಲಿಟಿ ಶೋ ಸಹಜವಾಗಿ ಮಾಡುತ್ತೇವೆ ಅಂದರೂ ವೀಕ್ಷಕರು ಅದನ್ನು ತೆಗೆದುಕೊಳ್ಳುವುದು ಅನುಮಾನ. ಏಕೆಂದರೆ ಅವರಿಗೆ ಜಗಳ ಇರಬೇಕು. ಗೋಳು ನೋಡುವುದು ಇಷ್ಟ. ಬರೀ ಗೋಳು ಎಂದು ಬೈದುಕೊಳ್ಳುತ್ತಾ, ಮತ್ತೊಬ್ಬರ ಮನೆಯ ಗೋಳನ್ನೇ ಅವರು ನೋಡಲು ಬಯಸುತ್ತಾರೆ.

■ **ರಾಘವೇಂದ್ರ ಕೆ.**